ಪ್ರಬಂಧ

# ಸೊಳ್ಳೆಗಳ ಹತ್ಯೆ ಮತ್ತು ಪಾಪ ಪ್ರಜ್ಞೆ




**ವೆಂಕಟೇಶ ಮಾಚಕನೂರ**

ಕಲೆ: ವಿಶ್ವನಾಥ್ ಎ.ಎಸ್.


ವಯಸ್ಸು ಸರಿದಂತೆ ಮನುಷ್ಯನಿಗೆ ಅನೇಕ ಬಾಧೆಗಳು ಕಾಡತೊಡಗುತ್ತವೆ. ವಯಸ್ಸಾಗುವುದು ಎಂದರೆ ಸಾಮಾನ್ಯವಾಗಿ ನಿವೃತ್ತಿ ವಯಸ್ಸು, ಅರವತ್ತರ ಆಸುಪಾಸು. ಆರೋಗ್ಯ ಸಂಬಂಧಿ ಸಮಸ್ಯೆಗಳಾಗಿರಬಹುದು ಅಥವಾ ಜೀವನದ ಏರಿಳಿತಗಳಾಗಿರಬಹುದು, ಬದುಕಿನ ತವಕ ತಲ್ಲಣಗಳಾಗಿರಬಹುದು, ಆಗಾಗ ಅವು ಕಿರಿಕಿರಿ ಉಂಟುಮಾಡುತ್ತಿರುತ್ತವೆ. ಇನ್ನೇನು ನಿವೃತ್ತಿ ನಂತರ ನೆಮ್ಮದಿಯಿಂದ ಇರಬಹುದು ಅಂದರೆ ಭೂತಕಾಲ ಕಾಡತೊಡಗುತ್ತದೆ. ವೃತ್ತಿ ಜೀವನದಲ್ಲಿ ಎಸಗಿದ ಪ್ರಮಾದಗಳು, ಅನುಭವಿಸಿದ ಯಾತನೆಗಳು, ಅವಮಾನಗಳು, ಅನೇಕ ಬಗೆಯ ಹಳವಂಡಗಳು ಕುಟಕುತ್ತಿರುತ್ತವೆ. ಉದ್ದೇಶಪೂರ್ವಕವಲ್ಲದ ತಪ್ಪುಗಳೂ ಕಾಡುತ್ತಿರುತ್ತವೆ. ಹೀಗಾಗಿ ಆಗಾಗ ಅನೇಕರು ಮಾನಸಿಕ ತೊಳಲಾಟದಿಂದ ಬಳಲುವುದನ್ನೂ ನೋಡುತ್ತೇವೆ. ಪಾಪಪ್ರಜ್ಞೆ ಅನ್ನುವುದು ಹೀಗೆಯೆ ಬಂದಿರಬಹುದು. ಸುಳ್ಳು ಹೇಳುವುದು, ಆಕ್ರಮ ಅಧರ್ಮದಿಂದ ವರ್ತಿಸುವುದು, ಅಪರಾಧ ಕಾರ್ಯ ಮಾಡುವುದು, ಇತರರಿಗೆ ಹಿಂಸೆ ನೀಡುವುದು ಎಲ್ಲ ಪಾಪ ಕಾರ್ಯಗಳೇ. ಜೀವನದುದ್ದಕ್ಕೂ ಎಸಗುತ್ತ ಬಂದ ಇಂತಹ ಕ್ರಿಯೆಗಳೇ ಇಳಿ ವಯಸ್ಸಿನಲ್ಲಿ ಎಲ್ಲರಿಗೆ ಅಲ್ಲದಿದ್ದರೂ ಕೆಲವರಿಗಾದರು ಪಾಪಪ್ರಜ್ಞೆ ರೂಪದಲ್ಲಿ ಕಾಡುತ್ತಿರುತ್ತವೆ. ಎಲ್ಲ ಅನಾಚಾರಗಳನ್ನು ಮಾಡಿಯೂ ಯಾವ ಪ್ರಜ್ಞೆ ಇಲ್ಲದವರೂ ಇರುತ್ತಾರೆ. ಒಬ್ಬರಿಗೆ ಪಾಪ ಅನ್ನಿಸುವುದು ಇನ್ನೊಬ್ಬರಿಗೆ ಅನಿಸಲಿಕ್ಕಿಲ್ಲ.

ಪಾಪ ಪ್ರಜ್ಞೆ ಅನ್ನುವುದು ಮನುಷ್ಯನಿಗೆ ಮಾತ್ರ ಕಾಡುವ ವಿಷಯವಾಗಿದೆ, ಪಶು ಪಕ್ಷಿಗಳಿಗೆ ಪಾಪದ ಹಂಗಿದ್ದಂತೆ ಕಾಣುವುದಿಲ್ಲ. ಅವು ಒಂದನ್ನೊಂದು ತಿಂದು ಬದುಕುತ್ತವೆ. ಮನುಷ್ಯ ಕೂಡಾ ಅನೇಕ ಜೀವ ಜಂತುಗಳನ್ನು ತಿಂದು ಬದುಕುತ್ತಾನೆ. ಕೆಲವು ಮತಪಂಥಗಳು ಮನುಷ್ಯರೆಲ್ಲ ಪಾಪಿಗಳು ಎಂದೇ ಪರಿಗಣಿಸುತ್ತವೆ. ಮನುಷ್ಯ ಇತರ ಜೀವಜಂತುಗಳನ್ನು ಬಿಡಿ, ಇತರ ಮನುಷ್ಯರನ್ನೇ ಕೊಲ್ಲುತ್ತ, ಹಿಂಸಿಸುತ್ತ, ಆಕ್ರಮಣಕಾರಿಯಾಗಿಯೇ ಬದುಕುತ್ತಾ ಬಂದಿದ್ದಾನೆ. ಯುದ್ಧ ಅನ್ನುವುದು